ವಿಶಾಖ ಎನ್.

# ಸೋಲ್‌ನಲ್ಲಿ ಆಲಿಯಾ ಸಂಭ್ರಮ



**ಆಲಿಯಾ ಸೋಲ್‌ನಲ್ಲಿ ಕಳೆಯುತ್ತಿರುವ ಕ್ಷಣಗಳು ವಿಡಿಯೊ ಹಾಗೂ ಫೋಟೊಗಳ ರೂಪದಲ್ಲಿ ಹರಿದಾಡುತ್ತಿವೆ.**

ಆಲಿಯಾ ಭಟ್ ಸೋಲ್‌ಗೆ (ಕೆಲವರು ಸಿಯೋಲ್ ಎಂದೂ ಉಚ್ಚರಿಸುತ್ತಾರೆ) ಪ್ರವಾಸ ಹೋಗಿದ್ದು ಇದೇ ಮೊದಲು. ಅವರು ತಮ್ಮಷ್ಟಕ್ಕೆ ತಾವೇ ಏನೂ ಅಲ್ಲಿಗೆ ಹೋಗಲಿಲ್ಲ. 'ಗುಸ್ಸೀಸ್ 2024 ರನ್‌ವೇ ರೆಸಾರ್ಟ್ ಶೋ' ಸಲುವಾಗಿ ಹೋಗಿದ್ದು. ಆ ಪ್ರದರ್ಶನಕ್ಕೆ ಆಲಿಯಾ ಪ್ರಚಾರ ರಾಯಭಾರಿ. ಫ್ಯಾಷನ್ ಉತ್ಪನ್ನಗಳ ವಿಷಯದಲ್ಲಿ ಗುಸ್ಸಿ ಮುಂಚೂಣಿಯಲ್ಲಿರುವ ಕಂಪನಿ.

ಆಲಿಯಾ ಅಲ್ಲಿ ಕಳೆಯುತ್ತಿರುವ ಹಲವು ಕ್ಷಣಗಳು ವಿಡಿಯೊ ಅಥವಾ ಫೋಟೊಗಳ ರೂಪದಲ್ಲಿ ಹರಿದಾಡುತ್ತಿವೆ. ಅವರು ಬಿಳಿ ಬಣ್ಣದ ರಾಬ್ ಧರಿಸಿದ್ದು, ಹೋಟೆಲ್ ರೂಮ್‌ನ ಒಳಗಿಂದ ಸೋಲ್ ನಗರಿಯ ಇಮಾರತ್ತುಗಳನ್ನು ನೋಡುತ್ತಿರುವುದು, ಕಪ್ಪು ಬಣ್ಣದ ವಿನ್ಯಾಸಿತ ಉಡುಪು ಧರಿಸಿ, ಅಚ್ಚುಕಟ್ಟಾಗಿ ಬೈತಲೆ ತೆಗೆದು ತಲೆಗೂದಲು ಬಾಚಿದ ಭಂಗಿಯ ಫೋಟೊಗಳೆಲ್ಲ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿವೆ.

ಅಷ್ಟೇ ಅಲ್ಲ, ಅವರು ಕೊರಿಯಾ ಭಾಷೆ ಕಲಿಯುತ್ತಿರುವ ಸಣ್ಣ ವಿಡಿಯೊ ಕೂಡ ಅಪ್‌ಲೋಡ್ ಆಗಿದೆ. ಆಲಿಯಾ ತಮ್ಮ ಎದುರು ಕೂತವರಲ್ಲಿ, 'ಹಲೋ ಎನ್ನುವುದಕ್ಕೆ ಕೊರಿಯಾ ಭಾಷೆಯಲ್ಲಿ ಏನನ್ನುವಿರಿ' ಎಂದು ಕೇಳುತ್ತಾರೆ. ಅದಕ್ಕೆ ಅವರು, 'ಅನ್ಯೆಂಘಸೇಯೊ' ಎಂದು ಹೇಳಿಕೊಡುತ್ತಾರೆ. ಮುಖದ ತುಂಬಾ ನಗು ತುಳುಕಿಸುತ್ತಾ ಆಲಿಯಾ, 'ಹೆಲೊ' ಎಂದು ಹೇಳಿ, ಆಮೇಲೆ 'ಅನ್ಯೆಂಘಸೇಯೊ' ಎಂಬ ಪದವನ್ನೂ ಉಚ್ಚರಿಸುತ್ತಾರೆ. ಇದು ವಿಡಿಯೊದ ಸಾರ.

ಕೊರಿಯನ್ ಪಾಪ್ ಅರ್ಥಾತ್ ಕೆ–ಪಾಪ್ ಜನಪ್ರಿಯವಾಗಿರುವ ಕಾಲವಿದು. ಆಲಿಯಾ ತರಹದ ಫ್ಯಾಷನ್ ಸ್ಟೇಟ್‌ಮೆಂಟ್ ಇರುವ ನಟಿಯನ್ನು ಗುಸ್ಸಿ ಕಂಪನಿಯು ಸಹಜವಾಗಿಯೇ ಫ್ಯಾಷನ್ ಕಾರ್ಯಕ್ರಮದ ರಾಯಭಾರಿಯನ್ನಾಗಿ ಮಾಡಿಕೊಂಡಿದೆ. ಇದುವರೆಗೆ ಕೊರಿಯಾಗೆ ತಾವು ಭೇಟಿ ನೀಡಿರಲೇ ಇಲ್ಲ ಎನ್ನುವ ಸಂಗತಿಯನ್ನೂ ಆಲಿಯಾ ಇನ್ನೊಂದು ವಿಡಿಯೊದಲ್ಲಿ ಹೇಳಿಕೊಂಡಿದ್ದಾರೆ.

1960ರ ಕಾಲಘಟ್ಟದ ಶೈಲಿಯ ಕಪ್ಪು ಬಣ್ಣದ ಉಡುಪನ್ನು ಆಲಿಯಾ ತೊಟ್ಟಿದ್ದರು. ರೆಟ್ರೊ ಫೀಲಿಂಗ್ ನೀಡುವ ಉಡುಪು, ಹಳೆಯ ಕಾಲದ ಕೇಶವಿನ್ಯಾಸದ ಬಗೆಗೂ ಅವರು ಮಾತನಾಡಿದ್ದಾರೆ. ಬಟ್ಟೆ ಹಾಗೂ ಕೇಶವಿನ್ಯಾಸದ ವಿಷಯದಲ್ಲಿ ನಡೆಯುವ ಇಂತಹ ಪ್ರಯೋಗಗಳು ತಮಗೆ ಖುಷಿ ನೀಡುತ್ತವೆ ಎಂದೂ ಹೇಳಿಕೊಂಡಿದ್ದಾರೆ.

## 'ಪುಷ್ಪಾ 2' ಚಿತ್ರಕ್ಕೆ ಫಹಾದ್ ರಂಗು

'ಪುಷ್ಪಾ– ದಿ ರೂಲ್' ಅರ್ಥಾತ್ ಪುಷ್ಪಾ ತೆಲುಗು ಸಿನಿಮಾದ ಎರಡನೇ ಭಾಗದಲ್ಲಿ ತಮ್ಮ ಭಾಗದ ಚಿತ್ರೀಕರಣವನ್ನು ಫಹಾದ್ ಫಾಸಿಲ್ ಪೂರೈಸಿದ್ದಾರೆ. ಎಸ್‌ಪಿ ಭವರ್‌ಸಿಂಗ್ ಶೆಖಾವತ್ ಪಾತ್ರದಲ್ಲಿ ಬೋಳು ತಲೆಯ ಗೆಟಪ್‌ನಲ್ಲಿ ಫಹಾದ್ ಅಭಿನಯಿಸಿದ್ದಾರೆ. ಮೊದಲ ಭಾಗದ ಕ್ಲೈಮ್ಯಾಕ್ಸ್‌ಗೆ ಕೆಲವು ನಿಮಿಷಗಳಿರುವಂತೆ ಸಿನಿಮಾದಲ್ಲಿ ಅವರ ಪಾತ್ರದ ಪರಿಚಯ ಪ್ರೇಕ್ಷಕರಿಗೆ ಆಗಿತ್ತು. ಎರಡನೇ ಭಾಗದಲ್ಲಿ ಅವರ ಪಾತ್ರ ಹಾಗೂ ನಟ ಪುಷ್ಪಾ ಪಾತ್ರದ ನಡುವೆ ನಡೆಯುವ ಸಂಘರ್ಷವನ್ನು ಇನ್ನಷ್ಟು ವಿವರವಾಗಿ ನೋಡುವ ಅವಕಾಶ ಅಭಿಮಾನಿಗಳಿಗೆ ಸಿಗಲಿದೆ. ಅಲ್ಲು ಅರ್ಜುನ್ ನಟನೆಯ ಮುಖ್ಯ ಭಾಗದ ಚಿತ್ರೀಕರಣ ಈಗಾಗಲೇ ಮುಗಿದಿದೆ.



ಮೊದಲ ಭಾಗದ ಚಿತ್ರವು 350 ಕೋಟಿ ರೂಪಾಯಿಗೂ ಹೆಚ್ಚು ಹಣವನ್ನು ಬಾಚಿತ್ತು. ಎರಡನೇ ಭಾಗದ ಮೇಲೂ ನಿರೀಕ್ಷೆಯ ಭಾರವಿದೆ. ವಿಜಯ್ ಸೇತುಪತಿ ಎರಡನೇ ಭಾಗದಲ್ಲಿ ನಟಿಸುತ್ತಾರೆ ಎನ್ನುವ ಗುಸುಗುಸು ಇತ್ತು. ಆದರೆ, ಅದು ಸುಳ್ಳಾಗಿದೆ. ಫಹಾದ್ ತಮ್ಮ ಚಿತ್ರೀಕರಣ ಮುಗಿದ ಮೇಲೆ ಮಾನಿಟರ್‌ನಲ್ಲಿ ದೃಶ್ಯಗಳನ್ನು ನೋಡುತ್ತಿರುವ ಫೋಟೊ ಈಗ ಹರಿದಾಡುತ್ತಿದೆ. ನಿರ್ದೇಶಕ ಸುಕುಮಾರ್ ಅವರಿಗೆ ದೃಶ್ಯ ತೋರಿಸುತ್ತಾ ಏನನ್ನೋ ವಿವರಿಸುತ್ತಿದ್ದಾರೆ.

ಕೋವಿಡ್ ಕಾಲಘಟ್ಟದಲ್ಲಿ ಎದುರಾದ ವ್ಯತಿರಿಕ್ತ ಪರಿಸ್ಥಿತಿಯ ಕಾರಣದಿಂದಾಗಿ ಸಿನಿಮಾದ ಮೊದಲ ಭಾಗದಲ್ಲಿ ಅಂದುಕೊಂಡಷ್ಟು ಕಾಡಿನ ಸನ್ನಿವೇಶಗಳನ್ನು ಚಿತ್ರೀಕರಿಸಲು ನಿರ್ದೇಶಕರಿಗೆ ಆಗಿರಲಿಲ್ಲ. ಎರಡನೇ ಭಾಗದಲ್ಲಿ ಆ ಕೊರತೆಯೂ ನೀಗಲಿದೆ ಎನ್ನುವುದು ಸಿನಿಮಾ ಹೂರಣದ ಕುರಿತು ಮಾತನಾಡುತ್ತಿರುವವರ ಅಭಿಪ್ರಾಯ.